# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು-570006

ದಿನಾಂಕ 08.07.2019 ರಂದು ಮಧ್ಯಾಹ್ನ 03.00 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಡಳಿತ ಭವನದ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳಾದ ಪ್ರೊ. ಎಸ್. ವಿದ್ಯಾಶಂಕರ್ ರವರ ಅಧ್ಯಕ್ಷತೆಯಲ್ಲಿ ನಡೆದ 52ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ನಡವಳಿ.

| ಉಪಸ್ಥಿತರು | |
|---|---|
| **ಪ್ರೊ. ವಿದ್ಯಾಶಂಕರ್ ಎಸ್.**<br>ಮಾನ್ಯ ಕುಲಪತಿಗಳು ಹಾಗೂ<br>ಶೈಕ್ಷಣಿಕ ಮಂಡಳಿಯ ಅಧ್ಯಕ್ಷರು,<br>ಕರಾಮುವಿ, ಮೈಸೂರು. | **ಪ್ರೊ. ರಮೇಶ್. ಬಿ**<br>ಕುಲಸಚಿವರು<br>ಕರಾಮುವಿ,<br>ಮೈಸೂರು. |
| **ಪ್ರೊ. ಜಗದೀಶ**<br>ಡೀನ್ (ಶೈಕ್ಷಣಿಕ) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ. ಮೈಸೂರು. | **ಡಾ. ಎ. ಖಾದರ್ ಪಾಷಾ**<br>ಹಣಕಾಸು ಅಧಿಕಾರಿಗಳು ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ. ಮೈಸೂರು. |
| **ಪ್ರೊ. ಡಿ.ಬಿ. ಬಸವರಾಜ್**<br>ಡೀನ್ (ಅಧ್ಯಯನ ಕೇಂದ್ರಗಳು) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ. ಮೈಸೂರು. | **ಪ್ರೊ. ಎ, ರಂಗಸ್ವಾಮಿ**<br>ಕುಲಸಚಿವ (ಪರೀಕ್ಷಾಂಗ) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ. ಮೈಸೂರು. |
| **ಡಾ|| ಲಕ್ಷ್ಮಿ.ಎನ್**<br>ಮುಖ್ಯಸ್ಥರು, ಶಿಕ್ಷಣ ಶಾಸ್ತ್ರ ವಿಭಾಗ ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು | |

ಸಭೆಗೆ ಹಾಜರಾಗಿದ್ದ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಮುಂದುವರೆದು ಮಾನ್ಯ ಕುಲಪತಿಗಳು ಮಾತನಾಡುತ್ತಾ ಶೈಕ್ಷಣಿಕ ಮಂಡಳಿ ಸಭೆಯನ್ನು ಕರೆದಿರುವ ಉದ್ದೇಶವನ್ನು ಸದಸ್ಯರುಗಳ ಗಮನಕ್ಕೆ ತಂದರು.

15/7/19
ಕುಲಸಚಿವರು

ಕುಲಪತಿಗಳು
15/7/19.

ವಿಷಯ ಸಂಖ್ಯೆ : 52:01

ವಿಷಯ : ಕರಾಮುವಿ ನಿಲಯದ 2013-14 ಮತ್ತು 2014-15ನೇ ಸಾಲಿನ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಮುದ್ರಿಸಲು ಮತ್ತು ವಿದ್ಯಾರ್ಥಿಗಳಿಗೆ ಸಂಬಂಧಿಸಿದ ದತ್ತಾಂಶಗಳನ್ನು ವಿಶ್ವವಿದ್ಯಾನಿಲಯಕ್ಕೆ ಹಸ್ತಾಂತರಿಸದಿರುವ ಐ.ಇ.ಎಂ. ಸಂಸ್ಥೆ ಮೇಲೆ ಯಾವ ಕ್ರಮ ಕೈಗೊಳ್ಳುವುದು ಎಂಬುದರ ಬಗ್ಗೆ.

*****

2011-12 ಮತ್ತು 2012-13ರ ಶೈಕ್ಷಣಿಕ ಸಾಲಿನಲ್ಲಿ ಮಾನ್ಯತೆ ಹೊಂದಿದ್ದ ಅವಧಿಯ ವಿದ್ಯಾರ್ಥಿಗಳು 2015-16 ಮತ್ತು 2016-17ರಲ್ಲಿ ಪರೀಕ್ಷೆ ತೆಗೆದುಕೊಂಡಿದ್ದ ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳನ್ನು ಮತ್ತು ಮರುಮೌಲ್ಯಮಾಪನ ಫಲಿತಾಂಶವನ್ನು ಈ ಹಿಂದೆ ಪರೀಕ್ಷಾ ಕಾರ್ಯನಿರ್ವಹಿಸುತ್ತಿದ್ದ ಐ.ಇ.ಎಂ. ಸಂಸ್ಥೆಯವರು ನೀಡಿರುವುದಿಲ್ಲ.

ಈ ಮಧ್ಯೆ 2013-14 ಮತ್ತು 2014-15ರಲ್ಲಿ ಸ್ನಾತಕೋತ್ತರ ಪದವಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಿ ಅಂಕಪಟ್ಟಿಯನ್ನು ವಿತರಿಸಲಾಗಿರುತ್ತದೆ. 2015-16ರ ಸಾಲಿನಲ್ಲಿ ನಡೆಸಲಾದ ಪರೀಕ್ಷೆಯ ಫಲಿತಾಂಶವನ್ನು ಪ್ರಕಟಿಸಲಾಗಿರುತ್ತದೆ. ಆದರೆ ಅಂಕಪಟ್ಟಿಯನ್ನು ಐ.ಇ.ಎಂ. ಸಂಸ್ಥೆಯವರು ಅಂಕಪಟ್ಟಿಗಳನ್ನು ಮುದ್ರಿಸಿ ನೀಡಿರುವುದಿಲ್ಲ.

ದಿನಾಂಕ: 16.06.2015ರ ಯು.ಜಿ.ಸಿ. ಸಾರ್ವಜನಿಕ ಪ್ರಕಟಣೆಯಲ್ಲಿ 2013-14 ರಿಂದ ಜಾರಿಗೆ ಬಂದಂತೆ ಕರಾಮುವಿ ನಿಲಯದ ಮಾನ್ಯತೆಯನ್ನು ರದ್ದುಪಡಿಸಿದ್ದ ಹಿನ್ನೆಲೆಯಲ್ಲಿ ಹಾಗೂ ಈ ಮಧ್ಯೆ ವಿಶ್ವವಿದ್ಯಾನಿಲಯದ ಅಂಕಪಟ್ಟಿಗಳ ಬಗೆಗೆ ಸಿ.ಐ.ಡಿ. ತನಿಖೆ ನಡೆಯುತ್ತಿದ್ದ ಹಿನ್ನೆಲೆಯಲ್ಲಿ ಅಂಕಪಟ್ಟಿ ಮುದ್ರಣ ಕಾರ್ಯ ಸ್ಥಗಿತಗೊಂಡಿತ್ತು. ಆ ನಂತರದಲ್ಲಿ ಐ.ಇ.ಎಂ. ಸಂಸ್ಥೆಯವರು ಕಾರ್ಯನಿರ್ವಹಿಸುತ್ತಿದ್ದ ಕೊಠಡಿಗಳನ್ನು ಸೀಜ್ ಮಾಡಲಾಗಿತ್ತು. ಆದರೆ 2016-17 ರಲ್ಲಿ ಐ.ಇ.ಎಂ. ಸಂಸ್ಥೆಯವರಿಗೆ ಹುಂಡಿ ಪಾವತಿಸುವ ಸಂದರ್ಭದಲ್ಲಿ ಸದರಿ ಸಂಸ್ಥೆಯವರಿಗೆ ಪರೀಕ್ಷಾ ಕಾರ್ಯನಿರ್ವಹಿಸುತ್ತಿದ್ದ ಕೊಠಡಿಗಳ ಬೀಗದ ಕೀಗಳನ್ನು ನೀಡಲಾಗಿರುತ್ತದೆ. ಆದರೆ 2016-17ರ ಸಾಲಿನ ಪರೀಕ್ಷಾ ದತ್ತಾಂಶವನ್ನು ನೀಡಿರುವುದಿಲ್ಲ. ಈ ಸಂಬಂಧ ಸದರಿ ಸಾಲಿನ ದತ್ತಾಂಶವನ್ನು ಒದಗಿಸುವಂತೆ ಸಾಕಷ್ಟು ಬಾರಿ ಪತ್ರ ಮುಖೇನ ಹಾಗೂ ದೂರವಾಣಿ ಮೂಲಕ ತಿಳಿಸಲಾಗಿದ್ದರೂ ದತ್ತಾಂಶವನ್ನು ನೀಡಿರುವುದಿಲ್ಲ.

ಕರ್ನಾಟಕ ರಾಜ್ಯ ಸರ್ಕಾರವು ಆದೇಶ ಸಂಖ್ಯೆ: ಇಡಿ 54 ಇಬಿವಿ 2017 (ಭಾಗ-1) ದಿನಾಂಕ: 05.03.2018ರಲ್ಲಿ ದಿನಾಂಕ: 16.06.2015ರಲ್ಲಿ ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗವು (ಯು.ಜಿ.ಸಿ) ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯತೆಯನ್ನು ರದ್ದುಗೊಳಿಸುವ ಪೂರ್ವದಲ್ಲಿಯೇ ಮಾನ್ಯತೆ ಹೊಂದಿರುವ ತಾಂತ್ರಿಕೇತರ ಕೋರ್ಸ್‌ಗಳಿಗೆ ಕರ್ನಾಟಕ ರಾಜ್ಯದೊಳಗೆ ವ್ಯಾಸಂಗ ಮಾಡಿರುವ ಇನ್‌ಹೌಸ್ ಕೋರ್ಸ್‌ಗಳಿಗೆ 2013-14 ಮತ್ತು 2014-15ನೇ ಶೈಕ್ಷಣಿಕ ವರ್ಷದಲ್ಲಿ ಪ್ರವೇಶಾತಿ ಪಡೆದು ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ತೇರ್ಗಡೆಯಾದವರಿಗೆ ಮುಂದಿನ ಶೈಕ್ಷಣಿಕ ವ್ಯಾಸಂಗ / ನೇಮಕಾತಿ / ಮುಂಬಡ್ತಿಗಾಗಿ ಪರಿಗಣಿಸುವಂತೆ ಹಾಗೂ 2013ರ ಸಾಲಿನ ಪೂರ್ವದಲ್ಲಿ ಪ್ರವೇಶಾತಿ ಪಡೆದು ಉತ್ತೀರ್ಣರಾಗಿ ಅಂಕಪಟ್ಟಿ/ ಪದವಿ ಪ್ರಮಾಣ ಪತ್ರಗಳನ್ನು ಪಡೆಯದೇ ಇರುವ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ / ಅಂಕಪಟ್ಟಿಗಳನ್ನು ವಿತರಿಸಲು ಮತ್ತು ಕೋರ್ಸ್‌ಗಳನ್ನು ಅಪೂರ್ಣಗೊಳಿಸಿದ ವಿದ್ಯಾರ್ಥಿಗಳು ಸಹ ವ್ಯಾಸಂಗ ಮುಂದುವರೆಸಲು ಹಾಗೂ ಪದವಿ ಪ್ರಮಾಣ ಪತ್ರಗಳನ್ನು ವಿತರಿಸಲು ಪರಿನಿಯಮಾವಳಿಯನ್ವಯ ವಿಶ್ವವಿದ್ಯಾನಿಲಯವು ಅಗತ್ಯ ಕ್ರಮವಹಿಸುವಂತೆ ಆದೇಶಿಸಿರುತ್ತದೆ (ಪ್ರತಿ ಲಗತ್ತಿಸಿದೆ).

ಕುಲಸಚಿವರು

ಕುಲಪತಿಗಳು

15/7/19

ರಾಜ್ಯ ಸರ್ಕಾರದ ಈ ಆದೇಶವನ್ನು ಪರಿಗಣಿಸಿ ರಾಜ್ಯದ ಬೇರೆ ಬೇರೆ ವಿಶ್ವವಿದ್ಯಾನಿಲಯದ ನಮ್ಮ ವಿಶ್ವವಿದ್ಯಾನಿಲಯದ ಅಂಕಪಟ್ಟಿಗಳನ್ನು ಪ್ರವೇಶಾತಿ ಪರಿಗಣಿಸುತ್ತಿರುತ್ತವೆ. ಆದರೆ, ನಮ್ಮ ವಿಶ್ವವಿದ್ಯಾನಿಲಯದ ಪ್ರವೇಶಾತಿಯಲ್ಲಿಯೇ 2013-14 ಮತ್ತು 2014-15ನೇ ಸಾಲಿನ ಇನ್‌ಹೌಸ್ ಕೋರ್ಸ್‌ನ ವಿದ್ಯಾರ್ಥಿಗಳಿಗೆ ಪ್ರವೇಶಾತಿಯನ್ನು ನೀಡುತ್ತಿಲ್ಲವೆಂದು ವಿದ್ಯಾರ್ಥಿಗಳು ಪ್ರತಿನಿತ್ಯ ಪರೀಕ್ಷಾ ವಿಭಾಗಕ್ಕೆ ಭೇಟಿ ನೀಡಿ ತಮ್ಮ ಅಳಲನ್ನು ಆಕ್ರೋಶವನ್ನು ವ್ಯಕ್ತಪಡಿಸುತ್ತಿರುತ್ತಾರೆ.

2016ರ ಸೆಪ್ಟಂಬರ್/ಅಕ್ಟೋಬರ್‌ನಲ್ಲಿ ನಡೆದ ಎಂ.ಎ/ಎಂ.ಕಾಂ., ಪದವಿ ಪರೀಕ್ಷೆಗಳು ಹಾಗೂ 2017 ಫೆಬ್ರವರಿ/ಮಾರ್ಚ್‌ನಲ್ಲಿ ನಡೆದ ಬಿ.ಎ/ಬಿ.ಕಾಂ ಪದವಿ ಪರೀಕ್ಷೆಗಳಲ್ಲಿ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳಿಗೆ ಮರು ಮೌಲ್ಯಮಾನಪನ ಕಾರ್ಯವು ಮುಗಿದು ಫಲಿತಾಂಶ ಪ್ರಕಟಿಸಲು ಐಇಎಂ ಸಂಸ್ಥೆಯವರು ಈ ಸಂಬಂಧವಾದ ಪೂರಕ ದಾಖಲಾತಿಗಳನ್ನು ನೀಡಬೇಕಾಗಿರುತ್ತದೆ. ಪ್ರಸ್ತುತ 2011-12 ಮತ್ತು 2012-13ರ ಸಾಲಿನ ಅನುತೀರ್ಣರಾದ ವಿದ್ಯಾರ್ಥಿಗಳಿಗೆ ಪರೀಕ್ಷೆಯನ್ನು ನಡೆಸುತ್ತಿದ್ದು, ಈ ಅವದಿಯಲ್ಲಿನ ವಿದ್ಯಾರ್ಥಿಗಳು ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿರುವವರಿಗೆ ಮರುಮೌಲ್ಯಮಾಪನದ ಫಲಿತಾಂಶ ನೀಡದೇ ಪರೀಕ್ಷೆ ತೆಗೆದುಕೊಳ್ಳಲು ಅನಾನುಕೂಲವಾಗಿದೆ. ಎಂದು ಪರೀಕ್ಷಾಂಗ ವಿಭಾಗದಲ್ಲಿ ಪ್ರಶ್ನಿಸುತ್ತಿದ್ದು, ನ್ಯಾಯಲಯಕ್ಕೆ ಮೊರೆಹೋಗುವ ಬಗ್ಗೆ ತಿಳಿಸುತ್ತಿದ್ದಾರೆ.

2013-14 ಮತ್ತು 2014-15ನೇ ಸಾಲಿನಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷೆ ಬರೆದಿದ್ದ ವಿದ್ಯಾರ್ಥಿಗಳ ಫಲಿತಾಂಶವು ಪ್ರಕಟವಾಗಿರುತ್ತದೆ. ಆದರೆ ಈ ಸಾಲಿನ ವಿದ್ಯಾರ್ಥಿಗಳ ಅಂಕಪಟ್ಟಿಯು ಮುದ್ರಣವಾಗಿರುವುದಿಲ್ಲ. ಈ ಸಾಲಿನ ವಿದ್ಯಾರ್ಥಿಗಳು ಸರ್ಕಾರದ ವಿವಿಧ ನೇಮಕಾತಿಗೆ ಅರ್ಜಿಸಲ್ಲಿಸಿ ಆಯ್ಕೆಗೊಂಡಿದ್ದು ತಮ್ಮ ಅಂಕಪಟ್ಟಿಗಳನ್ನು ವಿತರಿಸುವಂತೆ ಒತ್ತಾಯಿಸುತ್ತಿರುತ್ತಾರೆ. ಈ ಹಿನ್ನೆಲೆಯಲ್ಲಿ ಕೆಳಕಂಡ ಅಂಶಗಳನ್ನು ಶೈಕ್ಷಣಿಕ ಮಂಡಳಿ ಸಭೆಗೆ ಮಂಡಿಸಿದೆ.

1. ಕರ್ನಾಟಕ ರಾಜ್ಯ ಸರ್ಕಾರವು ಆದೇಶ ಸಂಖ್ಯೆ: ಇಡಿ 54 ಇಒವಿ 2017 (ಭಾಗ-1) ದಿನಾಂಕ: 05.03.2018ರ ಆದೇಶದಂತೆ ವಿವಿಧ ಸಾಲಿನ ವಿದ್ಯಾರ್ಥಿಗಳ ಅಂಕಪಟ್ಟಿಗಳನ್ನು ಮುದ್ರಿಸಿ ವಿತರಿಸಲು ಯಾವ ಕ್ರಮ ಅನುಸರಿಸಬೇಕು.
2. ಐ.ಇ.ಎಂ. ಸಂಸ್ಥೆಯವರು ಪರೀಕ್ಷಾ ದತ್ತಾಂಶವನ್ನು ಈವರೆವಿಗೂ ನೀಡದಿರುವ ವಿಚಾರವಾಗಿ ಹಾಗೂ ಪರೀಕ್ಷಾ ವಿಭಾಗದಲ್ಲಿ ತಾವು ಕಾರ್ಯನಿರ್ವಹಿಸುತ್ತಿದ್ದ ಕೊಠಡಿಗಳ ಬೀಗದ ಕೀಗಳನ್ನು ಹಸ್ತಾಂತರಿಸದೆ ವಿದ್ಯಾರ್ಥಿಗಳಿಗೆ ಮತ್ತು ವಿಶ್ವವಿದ್ಯಾನಿಲಯಕ್ಕೆ ಮಾರಕವಾಗುವಂತೆ ವರ್ತಿಸುತ್ತಿರುವ ಐ.ಇ.ಎಂ. ಸಂಸ್ಥೆಯವರ ವಿರುದ್ಧ ಯಾವ ರೀತಿಯ ಕ್ರಮವಹಿಸಬೇಕು.

ಮೇಲಿನ ಕ್ರಮ ಸಂಖ್ಯೆ 1 ಮತ್ತು 2ರ ಅಂಶಗಳ ಬಗ್ಗೆ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಗೆ ಮಂಡಿಸಿದೆ.

ತೀರ್ಮಾನ : 2013-2014 ಮತ್ತು 2014-15ರಲ್ಲಿ ನಡೆದ ವಿವಿಧ ಕೋರ್ಸ್‌ಗಳ ಪರೀಕ್ಷೆಯ ದತ್ತಾಂಶಗಳ ಬಗ್ಗೆ ಐ.ಇ.ಎಂ. ಸಂಸ್ಥೆ ಮುಖ್ಯಸ್ಥರ ಜೊತೆ ಮಾತನಾಡಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದು. ಪರೀಕ್ಷಾಂಗ ವಿಭಾಗದಲ್ಲಿ ಸದರಿ ದತ್ತಾಂಶಗಳು ಲಭ್ಯವಿದ್ದಲ್ಲಿ ಅವುಗಳನ್ನು ಉಪಯೋಗಿಸಿಕೊಳ್ಳುವುದು ಮತ್ತು ಅಲ್ಲಿಯವರೆಗೆ ನಿಗದಿತ ನಮೂನೆಯಲ್ಲಿ ಪ್ರಮಾಣಪತ್ರಗಳನ್ನು ವಿದ್ಯಾರ್ಥಿಗಳ ಕೋರಿಕೆ ಮೇರೆಗೆ ನೀಡಲು ನಿರ್ಣಯಿಸಿತು.

---

15/7/19
ಕುಲಸಚಿವರು

ಕುಲಪತಿಗಳು
15/7/19

ವಿಷಯ ಸಂಖ್ಯೆ : 52:02

ವಿಷಯ : 2019–20ನೇ ಶೈಕ್ಷಣಿಕ ಸಾಲಿಗೆ ಪ್ರವೇಶಾತಿ ಸಂಖ್ಯೆ ಅಧಿಕಗೊಳಿಸುವ ನಿಟ್ಟಿನಲ್ಲಿ ಅಳವಡಿಸಿಕೊಳ್ಳಬೇಕಿರುವ ವಿವಿಧ ಕ್ರಮಗಳನ್ನು ರೂಪಿಸುವ ಸಂಬಂಧ ನಡೆದ ಸಭೆಯ ನಡಾವಳಿ ಅನುಮೋದನೆ ಕುರಿತು.

*****

ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ಕಚೇರಿ ಆದೇಶ ಸಂಖ್ಯೆ: ಕರಾಮುವಿ/ಡೀನ್(ಅ.ಕೇ)/ಸಾ.ಕ.ಸ.ಕೇ/2019–20, ದಿನಾಂಕ : 28–06–2019 ರಂತೆ 2019–20ನೇ ಶೈಕ್ಷಣಿಕ ಸಾಲಿಗೆ ಕಲಿಕಾರ್ಥಿ ಸಹಾಯ ಕೇಂದ್ರಗಳ ಸ್ಥಾಪನೆ ಸಂಬಂಧ ಸಮಿತಿ ರಚನೆಗೊಂಡಿದ್ದು, ಸದರಿ ಸಮಿತಿಯು ದಿನಾಂಕ: 29–06–2019 ರಂದು ಸಭೆ ನಡೆಸಿತು. ಸದರಿ ಸಭೆಯಲ್ಲಿ ಪ್ರವೇಶಾತಿ ಹೆಚ್ಚಿಸುವ ಸಂಬಂಧ ಕಲಿಕಾರ್ಥಿ ಸಹಾಯ ಕೇಂದ್ರಗಳ ಸಂಖ್ಯೆಯನ್ನು ಅಧಿಕಗೊಳಿಸುವುದು, ಕಲಿಕಾರ್ಥಿ ಸಹಾಯ ಕೇಂದ್ರಗಳಾಗ ಬಯಸುವ ರಾಜ್ಯದ ವಿವಿಧ ಕಾಲೇಜುಗಳಿಂದ 'ಅರ್ಜಿ' ಆಹ್ವಾನದ ಮಾದರಿ ರೂಪಿಸುವುದು, 'ಪತ್ರಿಕಾ ಜಾಹಿರಾತಿ'ನ ಮಾದರಿ ರೂಪಿಸುವುದನ್ನು ಕುರಿತು ಸಭೆಯು ಚರ್ಚಿಸಿ, ಶಿಫಾರಸ್ಸುಗಳನ್ನು ನೀಡಿದೆ.

ಸದರಿ ಸಭೆಯ ನಡಾವಳಿಯನ್ನು ಶೈಕ್ಷಣಿಕ ಮಂಡಳಿಯ ಸಭೆಯ ಅವಗಾಹನೆ ಮತ್ತು ಅನುಮೋದನೆಗಾಗಿ ವಿಷಯ ಮಂಡಿಸಿದೆ.

ತೀರ್ಮಾನ :

1. 'ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ' ಎಂಬ ಧ್ಯೇಯ ವಾಕ್ಯದಲ್ಲಿ ರಾಜ್ಯಾದ್ಯಂತ ಶಿಕ್ಷಣ ನೀಡಲು ಕರಾಮುವಿಯು ಅಧಿಕಾರ ಹೊಂದಿರುವುದರಿಂದ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ / ಅಗತ್ಯವಿರುವ ತಾಲ್ಲೂಕು ಕೇಂದ್ರಗಳಲ್ಲಿ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸುವುದು. ಇದಕ್ಕೆ ಯುಜಿಸಿ ದೂರಶಿಕ್ಷಣ ನಿಯಮಾವಳಿಗಳು – 2017 ರಂತೆ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಲು ಜಾಹೀರಾತು ನೀಡುವುದು, ಈ ಬಗ್ಗೆ Manual ಸಿದ್ಧಪಡಿಸಿ, ಅದರ ಪ್ರಕಾರ ಪ್ರಕ್ರಿಯೆ ಆರಂಭಿಸುವಂತೆ ನಿರ್ಣಯಿಸಿತು.
2. **Pre-admission Counseling** ನಲ್ಲಿ ಭಾಗವಹಿಸಿ ಯಶಸ್ವಿಯಾದ ಪ್ರತಿ ವಿದ್ಯಾರ್ಥಿಗಳನ್ನು ಆಧಾರವಾಗಿಟ್ಟುಕೊಂಡು ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ರೂ. 200/–ಗಳ ಪ್ರೋತ್ಸಾಹ ಧನವನ್ನು ಪಾವತಿಸುವಂತೆ ನಿರ್ಣಯಿಸಿತು.
3. ಕರಾಮುವಿಯ ಕೇಂದ್ರ ಕಛೇರಿಯಲ್ಲಿ ಒಂದು ಮಾದರಿ ಕಲಿಕಾರ್ಥಿ ಸಹಾಯ ಕೇಂದ್ರವನ್ನು ಸ್ಥಾಪಿಸಲು ಶಿಫಾರಸ್ಸು ಮಾಡಿತು.

---

ವಿಷಯ ಸಂಖ್ಯೆ : 52:03

ವಿಷಯ : ಕರಾಮುವಿ ದೂರಶಿಕ್ಷಣ ಸುಧಾರಣೆ ಸಮಿತಿಯ ಮಧ್ಯಂತರ ವರದಿಯನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವ ಬಗೆಗೆ.

*****

ಕರಾಮುವಿಯು 1996 ರಿಂದ ದೂರಶಿಕ್ಷಣವನ್ನು ರಾಜ್ಯದ ವಿವಿಧೆಡೆ ನೀಡುವ ನಿಟ್ಟಿನಲ್ಲಿ ಪ್ರಮುಖ ಪಾತ್ರವನ್ನು ವಹಿಸಿದೆ. ಕರಾಮುವಿಯು 'ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ' ಎಂಬ ಧ್ಯೇಯ ವಾಕ್ಯದೊಂದಿಗೆ – ಕರಾಮುವಿ ಕೇಂದ್ರ ಕಛೇರಿ, ಪ್ರಾದೇಶಿಕ ಕೇಂದ್ರಗಳು ಮತ್ತು ವಿದ್ಯಾರ್ಥಿ ಕಲಿಕಾರ್ಥಿ ಸಹಾಯ ಕೇಂದ್ರಗಳ ಮೂಲಕ ಶಿಕ್ಷಣವನ್ನು ನೀಡುತ್ತಿದೆ.

15/7/19
ಕುಲಸಚಿವರು

ಕುಲಪತಿಗಳು
15/7/19.

ಯುಜಿಸಿ ದೂರಶಿಕ್ಷಣ ನಿಯಮಾವಳಿ – 2017ರ ಪ್ರಕಾರ, ಸಾಂಪ್ರದಾಯಿಕ ವಿಶ್ವವಿದ್ಯಾನಿಲಯಗಳೂ ಸಹ ದೂರಶಿಕ್ಷಣವನ್ನು ನೀಡಲು ಅವಕಾಶ ಪಡೆದುಕೊಂಡಿವೆ. ಇಂತಹ ವಿಶ್ವವಿದ್ಯಾನಿಲಯಗಳು ಯುಜಿಸಿ ನಿಯಮಗಳನ್ನು ವೈಜ್ಞಾನಿಕವಾಗಿ ಪಾಲಿಸದೆ ಇರುವುದರಿಂದ ಕರಾಮುವಿಗೆ ಅನಾರೋಗ್ಯ ಪೈಪೋಟಿಯನ್ನು ನೀಡುತ್ತಿದೆ. ಇದರಿಂದ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಚಟುವಟಿಕೆಗಳು ಕುಂಠಿತವಾಗಬಹುದು ಎಂಬುದನ್ನು ಗಮನಿಸಿ ವಿಶ್ವವಿದ್ಯಾನಿಲಯಕ್ಕೆ ಪುನಶ್ಚೇತನ ನೀಡುವ ಸಲುವಾಗಿ ಪ್ರೊ. ಎನ್.ಎಸ್. ರಾಮೇಗೌಡ, ವಿಶ್ರಾಂತ ಕುಲಪತಿಗಳು, ಇವರ ನೇತೃತ್ವದಲ್ಲಿ ದೂರಶಿಕ್ಷಣ ಸುಧಾರಣಾ ಸಮಿತಿಯನ್ನು ದಿನಾಂಕ: 15.06.2019 ರಂದು ರಚಿಸಲಾಗಿತ್ತು. ದಿನಾಂಕ: 17.06.2019 ರಂದು ಸಭೆ ನಡೆಸಿ ವಿವಿಧ ವಿದ್ಯಾರ್ಥಿಗಳ ಸಹಾಯಕ ಸೇವೆಗಳು, Centre for Internal Quality Assurances (CIQA), ಪಠ್ಯಕ್ರಮಗಳ ಪರಿಷ್ಕರಣೆ ಇತ್ಯಾದಿ ಕುರಿತು ಸುದೀರ್ಘ ಚರ್ಚೆ ನಡೆಸಿ ಮಧ್ಯಂತರ ವರದಿಯನ್ನು ನೀಡಿರುತ್ತಾರೆ. ಹಲವು ಶಿಫಾರಸ್ಸುಗಳನ್ನೊಳಗೊಂಡ ವರದಿಯನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಮಂಡಿಸಿದ್ದು ಇದರ ಅನುಷ್ಠಾನ ಕುರಿತು ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

ತೀರ್ಮಾನ : ಕರಾಮುವಿ ದೂರಶಿಕ್ಷಣ ಸುಧಾರಣೆ ಉಪಸಮಿತಿ ನೀಡಿರುವ ಮಧ್ಯಂತರ ವರದಿಯಲ್ಲಿರುವ ಕಲಿಕಾರ್ಥಿ ಸಹಾಯ ಕೇಂದ್ರಗಳು, ಪಠ್ಯಕ್ರಮಗಳ ಪರಿಷ್ಕರಣೆ ಮತ್ತು CIQA ಗೆ ಪೂರ್ಣಕಾಲಿಕ ನಿರ್ದೇಶಕರನ್ನು ನೇಮಿಸಿಕೊಳ್ಳುವ ಸಂಬಂಧ ಸಭೆ ಅನುಮೋದಿಸಿತು.

---

ವಿಷಯ ಸಂಖ್ಯೆ : 52:04

ವಿಷಯ : ಯುಜಿಸಿ ದೂರಶಿಕ್ಷಣ ನಿಯಮಾವಳಿಗಳು – 2017ರ ಪ್ರಕಾರ ವಿಶ್ವವಿದ್ಯಾನಿಲಯದಲ್ಲಿ Centre for Internal Quality Assurance ಅನ್ನು ಔಪಚಾರಿಕವಾಗಿ ಸ್ಥಾಪಿಸುವುದು ಮತ್ತು ಅದಕ್ಕೆ ಪೂರ್ಣಕಾಲಿಕ ನಿರ್ದೇಶಕರನ್ನು ನೇಮಿಸುವ / ನಿಯೋಜಿಸುವ ಕುರಿತು.

*****

ಯುಜಿಸಿ ದೂರಶಿಕ್ಷಣ ಅಧಿಸೂಚನೆ, ದಿನಾಂಕ: 23.06.2017ರ ಭಾಗ 8 (i) ರ ಪ್ರಕಾರ ವಿಶ್ವವಿದ್ಯಾನಿಲಯದಲ್ಲಿ Centre for Internal Quality Assurance ಅನ್ನು ಸದರಿ ಅಧಿಸೂಚನೆ ಪ್ರಕಟವಾದ ದಿನದಿಂದ ಒಂದು ವರ್ಷದೊಳಗೆ ಸ್ಥಾಪಿಸುವಂತೆ ಸೂಚಿಸಿದೆ. ಪುಟ 51, Annexure-Iರಲ್ಲಿ Centre for Internal Quality Assurance ಎಂಬುದರ ಬಗ್ಗೆ ಕೆಳಕಂಡ ಮಾಹಿತಿ ಇರುತ್ತದೆ.

1. Objectives and functions of CIQA
2. Activities of CIQA
3. CIQA ಚಟುವಟಿಕೆಗಳನ್ನು ವಿಶ್ವವಿದ್ಯಾನಿಲಯದ ಶಾಸನಬದ್ಧ ಪ್ರಾಧಿಕಾರಗಳಿಗೆ ಸಲ್ಲಿಸುವುದು ಮತ್ತು ಅನುಮೋದನೆ ಪಡೆಯುವುದು.
4. CIQAವನ್ನು ನಿರ್ವಹಣೆ ಮಾಡಲು ಹಿರಿಯ ಪ್ರಾಧ್ಯಾಪಕರನ್ನು ಪೂರ್ಣಕಾಲಿಕ ನಿರ್ದೇಶಕರನ್ನಾಗಿ ನಿಯೋಜಿಸುವುದು. ಅಲ್ಲದೆ CIQA ಗೆ ಇನ್ನಿತರೆ ಶೈಕ್ಷಣಿಕ ಸಿಬ್ಬಂದಿ ಹಾಗೂ ಅಧ್ಯಾಪಕೇತರ ಸಿಬ್ಬಂದಿ ಒದಗಿಸುವುದು.
5. Committee for CIQA

15/7/19

ಕುಲಸಚಿವರು

ಕುಲಪತಿಗಳು

15/7/19

ದಿನಾಂಕ: 13.09.2017 ರಂದು ನಡೆದ 42ನೇ ಶೈಕ್ಷಣಿಕ ಮಂಡಳಿ ಸಭೆಯು ವಿಷಯ ಸಂಖ್ಯೆ: 42.01ರ Implementation of UGC Regulation (Open Distance Learning) ಬಗ್ಗೆ ನಿರ್ಣಯ ಕೈಗೊಂಡಿದೆ. 32 ಶೈಕ್ಷಣಿಕ ಕಾರ್ಯಕ್ರಮಗಳ ಬಗ್ಗೆ PPR ಗಳನ್ನು ಯುಜಿಸಿಗೆ ಕಳುಹಿಸಿ ಕೊಡುವುದು ಮತ್ತು ಅವುಗಳಲ್ಲಿರುವ ಅಂಶಗಳನ್ನು ಸಮರ್ಥವಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ CIQA ವನ್ನು ಸ್ಥಾಪಿಸಲಾಗಿತ್ತು.

National Assessment and Accreditation Council ಹೊರಡಿಸಿರುವ Manual for Assessment and Accreditation of Open Universities ಅನ್ನು ಪ್ರಕಟಿಸಿದೆ. ಆ Manual ನಲ್ಲಿ CIQAದ ಪಾತ್ರ ಬಹಳ ಪ್ರಮುಖವಾಗಿದೆ. ವಿಶ್ವವಿದ್ಯಾನಿಲಯವನ್ನು ಆಗಿಂದಾಗ್ಗೆ ಗುಣಮಟ್ಟದ ಶಿಕ್ಷಣವನ್ನು ನೀಡುವ ನಿಟ್ಟಿನಲ್ಲಿ ಅಗತ್ಯ ಶಿಫಾರಸ್ಸುಗಳನ್ನು CIQA ಮಾಡುತ್ತದೆ. ಅಲ್ಲದೆ ವಿಶ್ವವಿದ್ಯಾನಿಲಯದಲ್ಲಿರುವ ಶೈಕ್ಷಣಿಕ ವಿಭಾಗಗಳು, ಆಡಳಿತ ವಿಭಾಗ, ಹಣಕಾಸು ವಿಭಾಗ, ಪರೀಕ್ಷಾ ವಿಭಾಗ, ಅಧ್ಯಯನ ಕೇಂದ್ರ ಮತ್ತು ಮತ್ತಿತರ ಕೇಂದ್ರಗಳ ಚಟುವಟಿಕೆಗಳ ಕುರಿತು Self Study Reportನ್ನು ಸಿದ್ಧಪಡಿಸಬೇಕಾಗುತ್ತದೆ ಮತ್ತು ಅದನ್ನು NAACಗೆ ಸಲ್ಲಿಸಬೇಕಾಗುತ್ತದೆ. ಮುಂದುವರೆದು, NAAC peer team ವಿಶ್ವವಿದ್ಯಾನಿಲಯಕ್ಕೆ ಬಂದಾಗ ಅದರೊಡನೆ ಸಂಯೋಜನೆ ಮಾಡುವುದು ಇತ್ಯಾದಿಗಳನ್ನು ನಿರ್ವಹಿಸುವ ಸಲುವಾಗಿ CIQA ಬಗ್ಗೆ ಒಂದು ಪ್ರತ್ಯೇಕ ಘಟಕವನ್ನು ಸ್ಥಾಪಿಸಬೇಕಾಗುತ್ತದೆ. ಯುಜಿಸಿ ನಿಯಮದಂತೆ ವಿಶ್ವವಿದ್ಯಾನಿಲಯದಲ್ಲಿ CIQA ದೈನಂದಿನ ಚಟುವಟಿಕೆಗಳಲ್ಲಿ ಭಾಗವಹಿಸಿ ಅಗತ್ಯ ಗುಣಮಟ್ಟ ಹೆಚ್ಚಿಸುವ ದೃಷ್ಟಿಯಿಂದ ಶಿಫಾರಸ್ಸುಗಳನ್ನು ಮಾಡಬೇಕಾಗುತ್ತದೆ. ಮುಂದುವರೆದು ಇವುಗಳನ್ನು ಶಾಸನಬದ್ಧ ಸಭೆಗಳಲ್ಲಿ ಮಂಡಿಸಿ ಅಗತ್ಯ ತೀರ್ಮಾನಗಳನ್ನು ಪಡೆದುಕೊಂಡು ಅನುಷ್ಠಾನಗೊಳಿಸಬೇಕಾಗುತ್ತದೆ. ವಿಶ್ವವಿದ್ಯಾನಿಲಯದ ದೂರಶಿಕ್ಷಣ ಸುಧಾರಣಾ ಸಮಿತಿಯು ದಿನಾಂಕ: 17.06.2019 ರಲ್ಲಿ ನಡೆದ ಸಭೆಯಲ್ಲಿ ಶಿಫಾರಸ್ಸು ಮಾಡಲಾಗಿತ್ತು.

ಯುಜಿಸಿ ನಿಯಮದಂತೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ Centre for Internal Quality Assurance (CIQA) ವನ್ನು ಪರಿಣಾಮಕಾರಿಯಾಗಿ ನಿರ್ವಹಣೆ ಮಾಡಲು –

1. CIQA ಬಗ್ಗೆ ಪ್ರತ್ಯೇಕ ಘಟಕವನ್ನು ಸ್ಥಾಪಿಸುವುದು.
2. ಇದಕ್ಕೆ ಹಿರಿಯ ಪ್ರಾಧ್ಯಾಪಕರನ್ನು ಪೂರ್ಣಕಾಲಿಕ ನಿರ್ದೇಶಕರನ್ನಾಗಿ ನಿಯೋಜಿಸುವುದು.
3. CIQA ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವ ಪ್ರಕ್ರಿಯೆಯಲ್ಲಿ ಶೈಕ್ಷಣಿಕ ಸಿಬ್ಬಂದಿ, ಬೋಧಕೇತರ ಸಿಬ್ಬಂದಿ ಹಾಗೂ ಇತರೆ ಸೌಲಭ್ಯ ಒದಗಿಸುವುದು.

ಸದರಿ ವಿಷಯವನ್ನು ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಳ್ಳುವ ಸಲುವಾಗಿ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಕೋರಿದೆ.

15/7/19
ಕುಲಸಚಿವರು

ಕುಲಪತಿಗಳು
15/7/19

ತೀರ್ಮಾನ : ಯುಜಿಸಿ ದೂರಶಿಕ್ಷಣ ನಿಯಮಾವಳಿ – 2017ರ ಪ್ರಕಾರ CIQA ಬಹಳ ಮುಖ್ಯವಾದ ಅಂಗವಾಗಿರುತ್ತದೆ. ಈ ಕೇಂದ್ರವನ್ನು 2017ರಲ್ಲಿಯೇ ವಿದ್ಯುಕ್ತವಾಗಿ ಪ್ರಾರಂಭಿಸಲಾಗಿತ್ತು. ಸದರಿ ಕೇಂದ್ರವನ್ನು ಪೂರ್ಣವಾಗಿ ಬಲವರ್ಧನೆ ಮಾಡುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಶಿಫಾರಸ್ಸು ಮಾಡಿತು. CIQA ಯು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲು ನುರಿತ ಪ್ರಾಧ್ಯಾಪಕರನ್ನು ನಿರ್ದೇಶಕರನ್ನಾಗಿ ನೇಮಿಸಿಕೊಳ್ಳುವ ಅಧಿಕಾರವನ್ನು ಸನ್ಮಾನ್ಯ ಕುಲಪತಿಗಳ ವಿವೇಚನೆಗೆ ಬಿಡಲು ಸಭೆ ನಿರ್ಣಯಿಸಿತು.

---

## ಅಧ್ಯಕ್ಷರ ಅಪ್ಪಣೆಯ ಮೇರೆಗೆ ಮಂಡಿಸಲಾದ ಇತರೆ ವಿಷಯಗಳು :–

ವಿಷಯ ಸಂಖ್ಯೆ 52:05

ವಿಷಯ : ವಿಶ್ವವಿದ್ಯಾನಿಲಯದ ಎಲ್ಲಾ ಎಂ.ಎಸ್ಸಿ ಶಿಕ್ಷಣಕ್ರಮಗಳ ಪ್ರಾಯೋಗಿಕ ಪರೀಕ್ಷೆಯ ಕಾರ್ಯಕ್ಕೆ ಸಂಭಾವನೆಯನ್ನು ನಿಗದಿಪಡಿಸಿರುವ ಬಗೆಗೆ.

******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಎಲ್ಲಾ ಎಂ.ಎಸ್ಸಿ ಶಿಕ್ಷಣಕ್ರಮಗಳ ಪ್ರಾಯೋಗಿಕ ಪರೀಕ್ಷೆಗಳ ಕಾರ್ಯಕ್ಕೆ ಸಂಬಂಧಿಸಿದಂತೆ ಸಂಭಾವನೆಯನ್ನು ನಿಗದಿಪಡಿಸುವ ಸಂಬಂಧ ವಿವಿಯ ಶೈಕ್ಷಣಿಕ ಸಮಿತಿ, ಹಣಕಾಸು ಸಮಿತಿ ಹಾಗೂ ವ್ಯವಸ್ಥಾಪನಾ ಮಂಡಳಿಯ ಸಭೆ ಅನುಮೋದನೆಯನ್ನು ಕಾಯ್ದಿರಿಸಿ ಸಂಖ್ಯೆ ಕರಾಮುವಿ/ ಪವಿ/ಎಂ.ಎಸ್ಸಿ/ಪ್ರಾ.ಪ.ಸಂ/2016-17. ದಿನಾಂಕ: 07.06.2016ರ ಆದೇಶವನ್ನು ಹೊರಡಿಸಿಕೊಂಡು ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸಿ ಅಧ್ಯಾಪಕರಗಳಿಗೆ ಸಂಭಾವನೆಯನ್ನು ಪಾವತಿಸಲಾಗಿರುತ್ತದೆ. ಈ ಸಂಬಂಧ ಆಡಿಟ್ ಆಕ್ಷೇಪಣೆ ವ್ಯಾಕ್ತವಾಗಿರುವ ಹಿನ್ನೆಲೆಯಲ್ಲಿ ಪ್ರಸ್ತುತ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಪ್ರಾಧಿಕಾರಗಳ ಅನುಮೋದನೆ ಪಡೆಯಲು ವಿಷಯವನ್ನು ಮಂಡಿಸಲಾಗಿದೆ.

ಪ್ರಾಯೋಗಿಕ ಪರೀಕ್ಷೆ ಸಂಬಂಧವಾಗಿ ನಿಗಧಿಯಾಗಿರುವ ಸಂಭಾವನೆ / ಭತ್ಯೆ ಈ ಕೆಳಕಂಡಂತಿದೆ.

| ಕ್ರ..ಸಂ. | ವಿವರ | ದರ<br>ರೂ ಗಳಲ್ಲಿ |
|---|---|---|
| 01 | ಕರಾಮುವಿಯ ಅಧ್ಯಾಪಕರುಗಳಿಗೆ ಒಂದು ದಿನಕ್ಕೆ ಸ್ಥಳೀಯ ಭತ್ಯೆ | ರೂ 600/- |
| 02 | ಬಾಹ್ಯ ಅಧ್ಯಾಪಕರುಗಳಿಗೆ ಒಂದು ದಿನಕ್ಕೆ ದಿನಭತ್ಯೆ<br>(ಪ್ರಯಾಣ ಭತ್ಯೆ ಪ್ರತಿ ಕಿ.ಮೀ ರೂ 4/-) | ರೂ 600/- |
| 03 | ಸ್ಥಳೀಯ ಅಧ್ಯಾಪಕರುಗಳಿಗೆ ಒಂದು ದಿನಕ್ಕೆ ಸ್ಥಳೀಯ ಭತ್ಯೆ | ರೂ. 300/- |
| 04 | ಬಾಹ್ಯ ಅಧ್ಯಾಪಕರುಗಳಿಗೆ ಸಂಭಾವನೆ<br>(ಪ್ರಾಯೋಗಿಕ ಪರೀಕ್ಷೆಯ ಎಲ್ಲಾ ಕಾಯಗಳು, ರೆಕಾರ್ಡ್ ಮೌಲ್ಯಮಾಪನ, ಮೌಖಿಕಪರೀಕ್ಷೆ ಸೇರಿ ಒಬ್ಬ ವಿದ್ಯಾರ್ಥಿಗೆ) | ರೂ 75/- |
| 05 | ಪ್ರಾಯೋಗಾಲಯ ಸಹಾಯಕರಿಗೆ ಪ್ರತಿ ಅವಧಿಗೆ ಸಂಭಾವನೆ | ರೂ. 400/- |
| 06 | ಪ್ರಯೋಗಾಲಯ ಡಿ ಗ್ರೂಪ್ ಸಹಾಯಕರಿಗೆ ಪ್ರತಿ ಅವಧಿಗೆ ಸಂಭಾವನೆ | ರೂ 200/- |
| 07 | ರಿಫ್ರೆಶ್‌ಮೆಂಟ್ ಪ್ರತಿ ಅವಧಿಗೆ ( ಬಿ.ಇ ಒ., ಅಧ್ಯಕ್ಷರು ಪಡೆಯುವುದು) | ರೂ 100/- |
| 08 | ಬಿಓಇ ಅಧ್ಯಕ್ಷರು ಕರಾಮುವಿ ನಿಯಾಮನುಸಾರ ಭತ್ಯೆ ಪಡೆಯುವುದು | ---- |
| 09 | ಪ್ರಾಯೋಗಾಲಯ ಶುಲ್ಕ / ಪ್ರಾಯೋಗಿಕ ಪರೀಕ್ಷೆಗಳಿಗೆ ರಸಾಯನಿಕ ವಸ್ತುಗಳ ವಾಸ್ತವಿಕ ವೆಚ್ಚವನ್ನು ಭರಿಸಲು ಮಾನ್ಯ ಕುಲಪತಿಯವರ ಅನುಮೋದನೆ ಪಡೆದ ನಂತರ ಹುಂಡಿ ಪಾವತಿಸಲು ಕ್ರಮಕೈಗೊಳ್ಳುವುದು.<br>(ಈ ಹಿಂದೆ ಅಧ್ಯಯನ ವಿಭಾಗವಾರು ಮುಖ್ಯಸ್ಥರು ಸದರಿ ಹುಂಡಿ ಪಾವತಿಗೆ ಮಾನ್ಯ ಕುಲಪತಿಯವರ ಅನುಮೋದನೆ ಪಡೆದು ಪ್ರತ್ಯೇಕ ಆದೇಶದಲ್ಲಿ ರೂ 20000/-ಗಳನ್ನು ಪಾವತಿ ಕ್ರಮಕ್ಕೈಗೊಳ್ಳುವಂತೆ ಆದೇಶ ಹೊರಡಿಸಲಾಗಿರುತ್ತದೆ) (ಪ್ರತಿ ಲಗತ್ತಿಸಿದೆ). | |

ಕುಲಸಚಿವರು

ಕುಲಪತಿಗಳು

15/7/19.

ಈ ಪಟ್ಟಿಯಲ್ಲಿ ತಿಳಿಸಿರುವ ಭತ್ಯೆಗಳು ಈಗಾಗಲೇ ನಿಗದಿಯಾಗಿ ಪಾವತಿಸಿರುವ ಅಂಶವನ್ನು ಶೈಕ್ಷಣಿಕ ಮಂಡಳಿ ಸಭೆಗೆ ವಿಷಯ ಮಂಡಿಸಿ ಗಮನಕ್ಕೆ ತರುತ್ತಾ, ಸದರಿ ಭತ್ಯೆಗಳ ನಿಗಧಿ ಸಂಬಂಧ ಘಟನೋತ್ತರ ಅನುಮೋದನೆ ಕೋರಿದೆ.

ತೀರ್ಮಾನ : ಎಂ.ಎಸ್ಸಿ. ಕೋರ್ಸ್‌ಗಳ ಪ್ರಾಯೋಗಿಕ ತರಗತಿಗಳು ಮತ್ತು ಅದಕ್ಕೆ ಸಂಬಂಧಪಟ್ಟ ಮತ್ತು ಪ್ರಾಯೋಗಿಕ ಪರೀಕ್ಷೆಗಳ ಬಾಹ್ಯ ಪರೀಕ್ಷಕರುಗಳಿಗೆ ಸಂಭಾವನೆಯನ್ನು ನಿಗದಿಪಡಿಸಲು ಕುಲಸಚಿವ (ಪರೀಕ್ಷಾಂಗ) ರವರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಲು ಸಭೆ ನಿರ್ಣಯಿಸಿತು.

---

ಅಂತಿಮವಾಗಿ 52ನೇ ಶೈಕ್ಷಣಿಕ ಮಂಡಳಿ ಸಭೆಗೆ ಆಗಮಿಸಿ ಮಂಡಿತ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸೂಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲ ಸದಸ್ಯರುಗಳಿಗೂ ಮಾನ್ಯ ಕುಲಪತಿಗಳು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು ಹಾಗೂ
ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗೂ ಅಧ್ಯಕ್ಷರು
15/7/19.